**ಆದಾಯ ಕರ ಕಾಯಿದೆ ಮತ್ತು ನಿಯಮಗಳ ಅಂತರ್ಗತ ವರದಿ ಮಾಡುವ ಉದ್ದೇಶಕ್ಕಾಗಿ ಆಧಾರ್ ಸಲ್ಲಿಸಲು ಸಮ್ಮತಿ**

ಇವರಿಗೆ,
ಶಾಖಾ ವ್ಯವಸ್ಥಾಪಕರು,
ಎಚ್‌ಡಿಎಫ್‌ಸಿ ಬ್ಯಾಂಕ್ ಲಿ., _______________ ಬ್ರ್ಯಾಂಚ್

ಮಾನ್ಯ ಶ್ರೀ / ಶ್ರೀಮತಿ,
ವಿಷಯ : **ಆದಾಯ ಕರ ಕಾಯಿದೆ ಮತ್ತು ನಿಯಮಗಳ ಅಂತರ್ಗತ ವರದಿ ಮಾಡುವ ಉದ್ದೇಶಕ್ಕಾಗಿ ಆಧಾರ್ ಸಲ್ಲಿಸುವಿಕೆ**

(1) ಆದಾಯ ಕರ ಕಾಯಿದೆ ಮತ್ತು ನಿಯಮಗಳ ಅಂತರ್ಗತ ವರದಿ ಮಾಡುವ ಉದ್ದೇಶಕ್ಕಾಗಿ ಭಾರತ ಸರಕಾರ ಬಿಡುಗಡೆ ಮಾಡಿರುವಂತೆ ನನ್ನ ಪರ್ಮನೆಂಟ್ ಅಕೌಂಟ್ ನಂಬರನ್ನು (PAN) ನಾನು ಸಲ್ಲಿಸಬಹುದು ಎಂದು ನನಗೆ ಮಾಹಿತಿ ನೀಡಲಾಗಿದೆ. ಆದರೂ, ನಾನು ಸ್ವ-ಇಚ್ಛೆಯಿಂದ ಬ್ಯಾಂಕಿಗೆ ನನ್ನ ಆಧಾರ್ ನಂಬರ್ (PANನ ಬದಲು), ವರ್ಚ್ಯುವಲ್ ಐಡಿ, ಇ-ಆಧಾರ್, ಎಕ್ಸ್‌ಎಮ್‌ಎಲ್, ಮಾಸ್ಕ್ಡ್ ಆಧಾರ್, ಆಧಾರ್ ವಿವರಗಳು, ಡೆಮೊಗ್ರಾಫಿಕ್ ಮಾಹಿತಿ, ಪರಿಚಯದ ಮಾಹಿತಿ, ಆಧಾರ್ ರಿಜಿಸ್ಟರ್ಡ್ ಮೊಬೈಲ್ ನಂಬರ್, ಫೇಸ್ ಅಥೆಂಟಿಕೇಶನ್ ವಿವರಗಳು ಮತ್ತು/ಅಥವಾ ಬಾಯೊಮೆಟ್ರಿಕ್ ವಿವರಗಳನ್ನು (ಒಟ್ಟಿನಲ್ಲಿ, "ಮಾಹಿತಿ") ಒದಗಿಸಲು ಆರಿಸಿಕೊಂಡಿದ್ದೇನೆ.

(2) ಅನ್ವಯಿಸುವ ಕಾನೂನುಗಳ ಅನುಸಾರ, ನನ್ನ ಪರಿಚಯ, ಆಫ್‌ಲೈನ್ ಪ್ರಮಾಣೀಕರಣ ಅಥವಾ ಇ-ಕೆವೈಸಿ ಅಥವಾ ಹೌದು/ಅಲ್ಲ ದೃಢೀಕರಣ, ಡೆಮೊಗ್ರಾಫಿಕ್ ಅಥವಾ ಇತರ ದೃಢೀಕರಣ/ಪ್ರಮಾಣೀಕರಣ/ಪರಿಚಯ ಪಡೆಯುವ ಕಾರ್ಯಕ್ಕಾಗಿ ನಾನು ಬ್ಯಾಂಕಿಗೆ (ಮತ್ತು ಅವರ ಸೇವಾ ಪೂರೈಕೆದಾರರಿಗೆ) ನನ್ನ ಸಮ್ಮತಿ ನೀಡುತ್ತಿದ್ದೇನೆ.

(3) ಮೇಲ್ಕಾಣಿಸಿದ ಉದ್ದೇಶಕ್ಕಾಗಿ, ನಾನು ನನ್ನ ಸ್ವ-ಇಚ್ಛೆಯಿಂದ ಮತ್ತು ನನ್ನ ಸ್ವಂತ ನಿಷ್ಕರ್ಷೆಯ ಮೇರೆಗೆ, ಭಾರತ ಸರಕಾರ ನೀಡಿರುವಂಥ ನನ್ನ ಆಧಾರ್ ನಂಬರ್‌ನ್ನು (ಈಕೆಳಗೆ ನೀಡಲಾಗಿದೆ) ಎಚ್‌ಡಿಎಫ್‌ಸಿ ಬ್ಯಾಂಕಿಗೆ ನೀಡುತ್ತಿದ್ದೇನೆ ಮತ್ತು ಆದಾಯ ಕರ ಕಾಯಿದೆ ಮತ್ತು ನಿಯಮಗಳ ಅಂತರ್ಗತ ಸದ್ಯದ ಹಾಗೂ ಭವಿಷ್ಯತ್ತಿನ ಎಲ್ಲಾ ವರದಿ ಮಾಡುವ ಉದ್ದೇಶಕ್ಕಾಗಿ ನನ್ನ ಆಧಾರ್ ನಂಬರನ್ನು ಬಳಸಿಕೊಳ್ಳಲು ಮತ್ತು ಯುಐಡಿಎಐಯೊಂದಿಗೆ ದೃಢೀಕರಣಕ್ಕಾಗಿ ನನ್ನ ಆಧಾರ್ ವಿವರಗಳನ್ನು ಬಳಸಿಕೊಳ್ಳಲು ನಾನು ಸ್ವ-ಇಚ್ಛೆಯಿಂದ ನನ್ನ ಸಮ್ಮತಿ ನೀಡುತ್ತಿದ್ದೇನೆ.

| **Aadhaar Number** | : | | | | | | | | | | | | |
|---|---|---|---|---|---|---|---|---|---|---|---|---|---|

**ಆಧಾರ್ ನಂಬರ್**

(4) ಈ ಸಮ್ಮತಿ, ಆಧಾರ್‌ನ್ನು ಸಂಗ್ರಹಿಸುವ ಉದ್ದೇಶ ಮತ್ತು ಯುಐಡಿಎಐಯ ಪ್ರಮಾಣೀಕರಣದ ನಂತರ ಹಂಚಿಕೊಳ್ಳಲಾಗಬಹುದಾದ ಮಾಹಿತಿಯ (ಆಧಾರ್ ವಿವರಗಳು) ನನಗೆ ಸ್ಥಳೀಯ ಭಾಷೆಯಲ್ಲಿ ವಿವರಿಸಲಾಗಿದೆ. ಇಲ್ಲಿ ಬ್ಯಾಂಕಿಗೆ ಸಲ್ಲಿಸಲಾದ ನನ್ನ ಮಾಹಿತಿಯನ್ನು ಮೇಲ್ಕಾಣಿಸಿದ ಉದ್ದೇಶಗಳಿಗೆ ಹೊರತಾಗಿ ಅಥವಾ ಕಾನೂನಿನ ಅನುಸಾರ ಅಗತ್ಯವಾದ ಹೊರತಾಗಿ ಬೇರೆ ಯಾವುದೇ ಉದ್ದೇಶಕ್ಕಾಗಿ ಬಳಸಿಕೊಳ್ಳಲಾಗುವುದಿಲ್ಲ ಎಂದು ನನಗೆ ಮನದಟ್ಟು ಮಾಡಿಕೊಡಲಾಗಿದೆ.

(5) ನನ್ನ ಬಾಯೊಮೆಟ್ರಿಕ್ಸ್‌ನ್ನು ಶೇಖರಿಸಿ ಇರಿಸಲಾಗದು/ಹಂಚಿಕೊಳ್ಳಲಾಗದು; ಮತ್ತು ಆಧಾರ್ ವಿವರಗಳನ್ನು ಸೆಂಟ್ರಲ್ ಐಡೆಂಟಿಟೀಸ್ ಡೇಟಾ ರಿಪೋಜಿಟರಿಗೆ (CIDR) ಮೇಲ್ಕಾಣಿಸಿದ ಉದ್ದೇಶಕ್ಕಾಗಿ ಪ್ರಮಾಣೀಕರಣಕ್ಕಾಗಿ ಮಾತ್ರವೇ ಸಲ್ಲಿಸಲಾಗುತ್ತದೆ ಎಂದು ಎಚ್‌ಡಿಎಫ್‌ಸಿ ಬ್ಯಾಂಕ್ ತಿಳಿಸಿದೆ. ಈ ಸಮ್ಮತಿ ಮತ್ತು ನನ್ನ ಆಧಾರ್ ಮಾಹಿತಿಯನ್ನು ನನ್ನ ಅಕೌಂಟ್ ವಿವರಗಳ ಸಂಗಡವೇ, ಅನ್ವಯಿಸುವ ಕಾನೂನಿನ ಅನುಸಾರ ಬ್ಯಾಂಕಿನಲ್ಲೇ ಶೇಖರಿಸಿ ಇರಿಸಲಾಗುತ್ತದೆ ಎಂದು ಎಚ್‌ಡಿಎಫ್‌ಸಿ ಬ್ಯಾಂಕ್ ನನಗೆ ತಿಳಿಸಿದೆ.

(6) ಮೇಲ್ಕಾಣಿಸಿರುವ ಉದ್ದೇಶಗಳಿಗಾಗಿ ಅಥವಾ ಎಚ್‌ಡಿಎಫ್‌ಸಿ ಬ್ಯಾಂಕ್‌ನ ಆಂತರಿಕ ಅವಶ್ಯಕತೆಗಳಿಗಾಗಿ, ಮಾಹಿತಿಯನ್ನು ಸಂಗ್ರಹಿಸಲು, ಬಹಿರಂಗಪಡಿಸಲು, ಹಂಚಿಕೊಳ್ಳಲು, ಶೇಖರಿಸಿಡಲು, ಉಳಿಸಿಕೊಳ್ಳಲು ಮತ್ತು ಬಳಸಿಕೊಳ್ಳಲು ಹಾಗೂ ಅನ್ವಯಿಸುವ ಕಾನೂನಿನ ಅನುಸಾರ ಅಗತ್ಯವಾಗಬಹುದಾದ ಡೇಟಾ ಪ್ರಮಾಣೀಕರಣ ಮತ್ತು ದಾಖಲೆಗಾಗಿ ನಾನು ಈ ಮೂಲಕ ಎಚ್‌ಡಿಎಫ್‌ಸಿ ಬ್ಯಾಂಕಿಗೆ ಅಧಿಕಾರ ನೀಡುತ್ತಿದ್ದೇನೆ ಮತ್ತು ಒಪ್ಪಿಕೊಳ್ಳುತ್ತಿದ್ದೇನೆ.

(7) ನಾನು ಸ್ವ-ಇಚ್ಛೆಯಿಂದ ಒದಗಿಸಿರುವ ಎಲ್ಲಾ ಮಾಹಿತಿಯು ಸತ್ಯವಾಗಿದೆ, ಸರಿಯಾಗಿದೆ ಮತ್ತು ಸಂಪೂರ್ಣವಾಗಿದೆ ಎಂದು ನಾನು ಈ ಮೂಲಕ ಉದ್ಘೋಷಿಸುತ್ತಿದ್ದೇನೆ. ಒಂದು ವೇಳೆ ಆಧಾರ್ ಸರಿಯಾಗಿಲ್ಲ ಅಥವಾ ನಾನು ಸರಿಯಾದ ಮಾಹಿತಿಯನ್ನು ಒದಗಿಸಿಲ್ಲ ಎಂದಾದಲ್ಲಿ, ಅದಕ್ಕಾಗಿ ನಾನು ಎಚ್‌ಡಿಎಫ್‌ಸಿ ಬ್ಯಾಂಕ್ ಅಥವಾ ಅದರ ಅಧಿಕಾರಿಗಳನ್ನು ನಾನು ಜವಾಬ್ದಾರಿ ಮಾಡುವುದಿಲ್ಲ.

ಇತಿ ನಿಮ್ಮವರೇ ಆಗಿರುವ,

ಗ್ರಾಹಕರ ಹೆಸರು : ____________________________
ಕಸ್ಟಮರ್ ಐಡಿ : ______________________________

____________________
(ಆಧಾರ್ ನಂಬರ್ ಹೊಂದಿರುವವರು / ಆಧಾರ್ ನಂಬರ್ ಹೊಂದಿರುವವರು ಅಪ್ರಾಪ್ತ ವಯಸ್ಕರೆಂದಾದಲ್ಲಿ ಹೆತ್ತವರು ಅಥವಾ ಪಾಲಕರ ಸಹಿ ಅಥವಾ ಹೆಬ್ಬೆರಳಚ್ಚು)

***Aadhaar I-T Reporting Consent Version_01082022***